## ಅದಕ್ಕೇ ತಾತಾ...

ಕೆಲದಿನಗಳ ಹಿಂದೆ ಊರಿಗೆ ಹೋಗಿದ್ದಾಗ ಸಂಜೆಯ ವೇಳೆ ಮನೆಯ ಎಲ್ಲ ಸದಸ್ಯರೂ ಮಂಡಕ್ಕಿ, ಬೋಂಡಾ ಸವಿಯುತ್ತ ಲೋಕಾಭಿರಾಮವಾಗಿ ಮಾತನಾಡುತ್ತಿದ್ದರು. ಆಗ ಬೆಲೆ ಏರಿಕೆ ಕಡೆಗೆ ಮಾತು ಹೊರಳಿತು. ನಮ್ಮ ಅಪ್ಪಾಜಿ, 'ಈಗಿನ ಕಾಲದಲ್ಲಿ ಪೇಟೆಗೆ ಐನೂರು ರೂಪಾಯಿ ತೆಗೆದುಕೊಂಡು ಹೋದರೆ ಯಾತಕ್ಕೂ ಸಾಲುವುದಿಲ್ಲ. ನಮ್ಮ ಕಾಲದಲ್ಲಿ ಹೀಗಿರಲಿಲ್ಲ ನೋಡಿ' ಎಂದರು. ಅಲ್ಲೇ ಬೋಂಡಾ ಮೆಲ್ಲುತ್ತಿದ್ದ ನಮ್ಮ ಪುಟ್ಟ ಆಶೂ ತಟ್ಟನೆ ಹೇಳಿದಳು: 'ಅದಕ್ಕೇ ತಾತಾ ಈಗ ಟೂ ಥೌಸಂಡ್ ನೋಟು ಬಿಟ್ಟಿರೋದು. ಪೇಟೆಗೆ ಹೋಗುವಾಗ ಅದನ್ನೇ ತಗೊಂಡು ಹೋಗು. ಎಲ್ಲಾ ತರಬಹುದು'.

**ನಳಿನಿ ಟಿ. ಭೀಮಪ್ಪ**





## ಬಹುಮಾನ!

ಯಲ್ಲಾಪುರ ತಾಲ್ಲೂಕಿನ ಹಳ್ಳಿಯೊಂದರಲ್ಲಿ ಯಕ್ಷಗಾನ ಪ್ರಸಂಗವೊಂದು ಪ್ರದರ್ಶನಗೊಳ್ಳುತ್ತಿತ್ತು. ಆ ಹಳ್ಳಿಯ ಬಹುತೇಕ ಎಲ್ಲರೂ ಯಕ್ಷಗಾನ ಪ್ರೇಮಿಗಳು. ಹಾಗಾಗಿ ಅಲ್ಲಿ ವರ್ಷಕ್ಕೆ ಮೂರ್ನಾಲ್ಕು ಬಾರಿ ಯಕ್ಷಗಾನ ಪ್ರಸಂಗಗಳು ನಡೆಯುತ್ತವೆ. ಯಕ್ಷಗಾನದ ಪಾತ್ರಧಾರಿಗಳಿಗೆ ಆಗಾಗ ಬಹುಮಾನದ ಸುರಿಮಳೆ. ಒಮ್ಮೆ ಯಕ್ಷಗಾನದಲ್ಲಿ ಪಾತ್ರ ನಿರ್ವಹಿಸಿದವನೇ ತನ್ನ ಸ್ನೇಹಿತನಿಗೆ ತನ್ನ ಪಾತ್ರಕ್ಕೆ ಬಹುಮಾನ ಕೊಡುವಂತೆ ಹೇಳಿ 100 ರೂಪಾಯಿ ಕೊಟ್ಟಿದ್ದ. ಹಣ ತೆಗೆದುಕೊಂಡ ಅವನ ಸ್ನೇಹಿತ ಎಲ್ಲಾಕಡೆ ಸುತ್ತಾಡಿ ಬರುವಾಗ ಅರ್ಧ ಯಕ್ಷಗಾನ ಮುಗಿದಿತ್ತು. ಆತ ತನ್ನ ಸ್ನೇಹಿತನ ಪಾತ್ರ ಮುಗಿದೇ ಹೋಯಿತು ಎಂಬ ಗಡಿಬಿಡಿಯಲ್ಲಿ ವೇದಿಕೆಯ ಮೇಲೆ ಬಂದು, 'ಬಲರಾಮನ ಪಾತ್ರ ಮಾಡಿದ ಶ್ರೀ... ಅವರ ಮನಸೂರೆಗೊಳ್ಳುವ ಅಭಿನಯಕ್ಕೆ 100 ರೂಪಾಯಿ ಬಹುಮಾನ ನೀಡುತ್ತಿದ್ದೇನೆ' ಎಂದು ಘೋಷಿಸಿಯೇ ಬಿಟ್ಟ! ಈ ಘೋಷಣೆ ಕೇಳಿದ ಬಲರಾಮ ಪಾತ್ರಧಾರಿ ಬೆವೆತು ನಿಂತ! ಏಕೆಂದರೆ, ಅದುವರೆಗೂ ಬಲರಾಮನ ಪ್ರವೇಶ ರಂಗಸ್ಥಳದಲ್ಲಿ ಆಗಿರಲೇ ಇಲ್ಲ!

**ಬೀರಣ್ಣ ನಾಯಕ ಮೊಗಟಾ**